# ಸೈನಿಕ ಶಾಲೆಯಲ್ಲಿ ಮರಕೆತ್ತನೆ ಕಲಾ ಶಿಬಿರಕ್ಕೆ ಚಾಲನೆ

ಸೈನಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ಮರಕೆತ್ತನೆಯ ಕಲಾ ಶಿಬಿರವನ್ನು ಆಯೋಜಿಸಲಾಗಿತ್ತು. ದಿ. 01 ಸೆ. 2017 ಶುಕ್ರವಾರ ಬೆಳಿಗ್ಗೆ ಶಾಲೆಯ ಪ್ರಾಚಾರ್ಯ ಕರ್ನಲ್ ತಮೋಜಿತ್ ಬಿಸ್ವಾಸ್ ಸಾಂಪ್ರದಾಯಿಗ ಜ್ಯೋತಿ ಬೆಳಗುವದರೊಂದೆಗೆ ಶಿಬಿರಕ್ಕೆ ಚಾಲನೆ ನೀಡಿದರು.

ನಂತರ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ದೇಶೀಯ ಕಲೆಗಳು ನಮ್ಮ ಸಂಸ್ಕೃತಿ ಜೀವಾಳವಿದ್ದಂತೆ. ದುರಂತದ ಸಂಗತಿಯೆಂದರೆ ಇತ್ತೀಚಿನ ದಿನಗಳಲ್ಲಿ ಅದೆಷ್ಟೋ ಕಲಾ ಪ್ರಕಾರಗಳು ಅಳಿವಿನ ಅಂಚಿನಲ್ಲಿವೆ. ಅವುಗಳಿಗೆ ಪುನರುಜ್ಜೀವನ ನೀಡಿ ಕಲಾ ಶ್ರೀಮಂತಿಕೆಯನ್ನು ಮೆರೆಯಿಸುವದು ಯುವಕರ ಹೊಣೆಯಾಗಿದೆಯೆಂದು ನುಡಿದರು.

ಮರಕೆತ್ತನೆಯು ಒಂದು ಅಪರೂಪದ ಕಲೆಯಾಗಿದೆ. ಅದನ್ನು ಉಳಿಸಿ ಬೆಳೆಸಬೇಕೆಂಬ ಉದ್ದೇಶದಿಂದ ಸೈನಿಕ ಶಾಲೆಯ ಎನ್ ಡಿ ಎ ಬ್ಲಾಕ್ ನಲ್ಲಿ ಸೆಪ್ಟೆಂಬರ್ ಒಂದರಿಂದ ನಾಲ್ಕರ ವರೆಗೆ ಈ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಒಟ್ಟು 30 ವಿದ್ಯಾರ್ಥಿಗಳು ಸಕ್ರೀಯವಾಗಿ ಪಾಲ್ಗೊಳ್ಳಲಿದ್ದಾರೆ. ಸಂಪನ್ಮೂಲ ವ್ಯಕ್ತಿಕಳಾಗಿ ಕಲಬುರ್ಗಿಯ ಚಂದ್ರಹಾನ ಜಾಲಿಹಾಳ ಮತ್ತು ಅವರೊಂದೆಗೆ ನಯನಾ ಹಾಗೂ ಪೂಜಾ ಭಾಗವವಿಸುತ್ತಿರುವರು. ಡಾ. ಶಶಿಕಲಾ ಹೂಗಾರ ಕಾರ್ಯ ಗಾರದ ಸಂಚಾಲಕರಾಗಿರುವರು.

ಶಿಬಿರದ ಉದ್ಘಾಟನೆಯ ಸಮಾರಂಭದಲಿ ಸೈನಿಕ ಶಾಲೆಯ ಉಪಪ್ರಾಚಾರ್ಯ ಸ್ಕ್ವಾಡರ್ನ್ ಲೀಡರ್ ಕೆ ಜೆ ಎಮ್ ರೆಡ್ಡಿ, ಆಡಳಿತಾಧಿಕಾರಿ ಸ್ಕ್ವಾಡರ್ನ್ ಲೀಡರ್ ಎ ಮುರುಳೀಧರನ್, ಹಿರಿಯ ಗುರುಗಳಾದ ಜಿ ಶ್ರೀರಾಮಮೂರ್ತಿ ಸಿಬ್ಬಂದಿಯವರು ಹಾಗೂ ಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.